ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ,
ತರೀಕೆರೆ.

ಸಿಸಿ ನಂಬರ್ **1087/2022**

ಸಾಕ್ಷಿಯ ಹೆಸರು : ಕೃಷ್ಣನಾಯಕ್ ಸಿ.ಡಬ್ಲ್ಯೂ **13**

ತಂದೆಯ ಹೆಸರು : ಖಂಡ್ಯಾನಾಯಕ್ ಪಿ.ಡಬ್ಲ್ಯೂ **5**

ವಯಸ್ಸು : **41** ವರ್ಷ

ಉದ್ಯೋಗ : ಪಿ.ಎಸ್.ಐ

ವಾಸ ಸ್ಥಳ : ಅಜ್ಜಂಪುರ

ದಿನಾಂಕ:**10.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು
ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ನಾನು 2021 ರಿಂದ 2024 ಜುಲೈ ತಿಂಗಳವರೆಗೆ ತರೀಕೆರೆಯಲ್ಲಿ ಪಿ.ಎಸ್.ಐ ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ:12.05.2022 ರಂದು ಚಾಸಾ-12 ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲನೆ ಮಾಡಿದ್ದೇನೆ. ಅದೇ ದಿನ ಮದ್ಯವನ್ನು ರಸಾಯನಿಕ ಪರೀಕ್ಷೆಗಾಗಿ ಚಾಸಾ-11 ರವರಿಗ ಕಳುಹಿಸಿಕೊಟ್ಟಿದ್ದೇನೆ. ದಿ:27.07.2022 ರಂದು ರಸಾಯನಿಕ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಗುನ್ನ ಸ್ಥಳದ ಪಂಚಾಯಿತಿ ದಾಖಲೆಗಳನ್ನು ಪಡೆದುಕೊಂಡು ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತೇನೆ.

ರಸಾಯನಿಕ ವರದಿಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ಅಸೆಸ್ಮೆಂಟ್ ನಕಲನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು, ಗ್ರಾಮ ಪಂಚಾಯ್ತಿಯ ವರದಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:

ನಾನು ಮದ್ಯವನ್ನು ರಸಾಯನಿಕ ಪರೀಕ್ಷೆಗಾಗಿ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ರಸಾಯನಿಕ ಪರೀಕ್ಷಾ ವರದಿ ಅಥವಾ ಗುನ್ನಾ ಸ್ಥಳ ಅಸೆಸ್ಮೆಂಟ್ ನಕಲನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ-ಸಂಖ್ಯೆಗಳಿಗೋಸ್ಕರ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದು ಗೊತ್ತಿದ್ದರೂ ಕೂಡ ಆತನ ವಿರುದ್ಧ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ:

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.